602 (466) ಡಾ ಮಹಾದೇವಪ್ಪ ಹೆಚ್ ಸಿ (ಟಿ ನರಸೀಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನೇಕ ಗ್ರಾಮಗಳಲ್ಲಿರುವ ದಲಿತರಿಗೆ ಕುಡಿಯುವ ನೀರಿನ ವಿಷಯದಲ್ಲಿ ಗ್ರಾಮದಿಂದ ಬಹಿಷ್ಕರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬಹಿಷ್ಕಾರಕ್ಕೆ ಒಳಗಾದ ದಲಿತರ ಕುಟುಂಬದವರಿಗೆ ಸರ್ಕಾರದ ವತಿಯಿಂದ ಕೈಗೊಳ್ಳಲಾಗಿರುವ ಅನುಕೂಲಗಳೇನು (ಸಮಗ್ರ ಮಾಹಿತಿ ನೀಡುವುದು)?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ವಿಜಾಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕು, ಕಡಕೋಳ ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರು ಕುಡಿಯುವ ಕೆರೆ ನೀರನ್ನು ಉಪಯೋಗಿಸುವ ವಿಷಯವಾಗಿ ಸವರ್ಣೀಯ ಜನಾಂಗದವರು, ಪರಿಶಿಷ್ಟ ಜಾತಿಯ ಜನಾಂಗದವರಿಗೆ ಅಘೋಷಿತ ಸಾಮಾಜಿಕ, ಬಹಿಷ್ಕಾರ ಹಾಕಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಬಸವನಬಾಗೇವಾಡಿ ತಾಲ್ಲೂಕು ಕಡಕೋಳ ಗ್ರಾಮದಲ್ಲಿ ಬಹಿಷ್ಕಾರಕ್ಕೊಳಗಾದ ದಲಿತ ಕುಟುಂಬದವರಿಗೆ ಅದೇ ಗ್ರಾಮದ ಕೆರೆಯ ನೀರನ್ನು ಕುಡಿಯಲು ಅನುಕೂಲವಾಗುವಂತೆ ಕೆರೆಯ ಹೂಳೆತ್ತಿ ನೀರನ್ನು ಸ್ವಚ್ಛಗೊಳಿಸಿ, ಉಪಯೋಗಿಸಲು ಅನುವು ಮಾಡಿಕೊಡಲಾಗಿದೆ ಈಗ ಗ್ರಾಮದ ದಲಿತರೂ ಹಾಗೂ ಸವರ್ಣೀಯರು ಸದರಿ ಗ್ರಾಮದ ಕೆರೆಯ ನೀರನ್ನು ಯಾವುದೇ ತಾರತಮ್ಯವಿಲ್ಲದೇ ಉಪಯೋಗಿಸುತ್ತಿದ್ದಾರೆ

ಅದರಂತೆ ಬಹಿಷ್ಕಾರಕ್ಕೊಳಗಾದ ದಲಿತರಿಗೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮುಖಾಂತರ ರೂ 17 50 ಲಕ್ಷ ಅನುದಾನದಲ್ಲಿ ವಿವಿಧ ಕಾಮಗಾರಿಗಳು, ರಸ್ತೆ ಅಭಿವೃದ್ಧಿ ಹಾಗೂ ಹಿಟ್ಟಿನ ಗಿರಣಿ ಹಾಗೂ ಕಿರಾಣಿ ಅಂಗಡಿ ಸೌಲಭ್ಯ ಒದಗಿಸಿದ್ದು, ಒಟ್ಟು ಪಂಚಾಯತ್ ವಿಜಾಪುರರವರಿಂದ ವಿತರಿಸಲಾಗಿದೆ ಬಹಿಷ್ಕಾರದಲ್ಲಿ ನೊಂದ ದಲಿತರಿಗೆ ಸ್ವಯಂ ಉದ್ಯೋಗಕ್ಕಾಗಿ ರೂ 4 00 ಲಕ್ಷ ಅನುದಾನದಲ್ಲಿ ವಿವಿಧ ಉದ್ಯೋಗಾವಕಾಶಗಳನ್ನು ಕೂಡ ಒದಗಿಸಲಾಗಿದೆ ಮುಂದುವರೆದು ದಲಿತ ಕುಟುಂಬದ ಮಕ್ಕಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ವಿವಿಧ ವಿದ್ಯಾರ್ಥಿವೇತನಗಳನ್ನು ಮಂಜೂರು ಮಾಡಲಾಗಿದೆ ಹಾಗೂ ವೈದ್ಯಕೀಯ ತಪಾಸಣೆ ಸಹ ಆರೋಗ್ಯ ಇಲಾಖೆಯಿಂದ ಪ್ರತ್ಯೇಕವಾಗಿ ಒದಗಿಸಿಕೊಡಲಾಗಿದೆ ದಲಿತ ದೇವದಾಸಿ ಕುಟುಂಬದವರಿಗೆ

ಪ್ರತ್ಯೇಕವಾಗಿ ಸಹಾಯ ಸವಲತ್ತು ಒದಗಿಸಲಾಗಿದೆ ಒಟ್ಟಾರೆ ಈಗ ಸದರಿ ಗ್ರಾಮದ ದಲಿತ ಕುಟುಬಂದವರಿಗೆ ಸಕಲ ಸೌಲಭ್ಯಗಳನ್ನು ಒದಗಿಸಿದ್ದು, ಈಗ ಯಾವ ತರದ ಬಹಿಷ್ಕಾರ ಇರುವುದಿಲ್ಲ

ವಿಜಾಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ ಕಡಕೋಳ ಗ್ರಾಮದ ಬಹಿಷ್ಕಾರದಲ್ಲಿ ನೊಂದ ದಲಿತರಿಗೆ ಸರ್ಕಾರದ ವಿವಿಧ ಇಲಾಖೆಗಳಿಂದ ಕೊಡ ಮಾಡಿದ ಸವಲತ್ತುಗಳ ವಿವರಗಳು –

1) ಬಸವನಬಾಗೇವಾಡಿ ತಾಲ್ಲೂಕಿನ ಕಡಕೋಳ ಗ್ರಾಮದಲ್ಲಿ ಸವರ್ಣೀಯರು ಮತ್ತು ದಲಿತರ ಮಧ್ಯ ಸಂಘರ್ಷ ಉಂಟಾಗಿ ಜುಲೈ–2006ರ ತಿಂಗಳಲ್ಲಿ ಘಟನೆ ಜರುಗಿದ ನಂತರ ತಹಶೀಲ್ದಾರ ಬಾಗೇವಾಡಿ ಹಾಗೂ ರೆವಿನ್ಯೂ ಇನ್ಸ್‌ಪೆಕ್ಟರ್‌ರವರ ಮುಖಾಂತರ ಗ್ರಾಮದ ನೊಂದ ಪರಿಶಿಷ್ಟ ಜಾತಿಯ ಜನರಿಗೆ 8 ಕ್ವಿಂಟಲ್ ಅಕ್ಕಿ ಹಾಗೂ ಗೋಧಿಯನ್ನು ವಿತರಿಸಲಾಗಿದೆ

2) ದಿನಾಂಕ 28–07–06ರಂದು ಜಿಲ್ಲಾಧಿಕಾರಿಗಳು ವಿಜಾಪೂರ ಹಾಗೂ ಜಿಲ್ಲಾ ಪೊಲೀಸ್ ಅಧಿಕಾರಿಗಳು ವಿಜಾಪುರರವರ ಸದರಿ ಗ್ರಾಮದಲ್ಲಿ ದಲಿತರ ಹಾಗೂ ಸವರ್ಣೀಯರ ಸಂಧಾನ ಸಭೆ ನಡೆಸಿ, ಅತಿವೃಷ್ಟಿ ಯೋಜನೆಯಡಿ ಮಾನ್ಯ ಜಿಲ್ಲಾಧಿಕಾರಿಗಳು ನೊಂದ ಪರಿಶಿಷ್ಟ ಜಾತಿ ಜನರಿಗೆ ರೂ 100 ಲಕ್ಷ ಅನುದಾನದಲ್ಲಿ ಕೆರೆ ಹೂಳೆತ್ತುವ ಕಾಮಗಾರಿ ತೆಗೆದುಕೊಂಡು 96 ಕ್ವಿಂಟಲ್ ಅಕ್ಕಿ ಗೋಧಿ ವಿತರಣೆ ಮಾಡಿರುತ್ತಾರೆ

3) ಎಸ್ ಜಿ ಆರ್ ವೈ ಯೋಜನೆಯಡಿ ರೂ 189 ಲಕ್ಷ ಅನುದಾನದಲ್ಲಿ ಕಾಮಗಾರಿಗಳನ್ನು ತೆಗೆದುಕೊಂಡು ನೊಂದ ಪರಿಶಿಷ್ಟ ಜಾತಿ ಜನರಿಗೆ ಕೆಲಸ ಕಾರ್ಯಗಳನ್ನು ಒದಗಿಸಿಕೊಳ್ಳಲಾಗಿದೆ

4) ಗ್ರಾಮ ಪಂಚಾಯತ್ ಶೇ 20ರ ಅನುದಾನದಲ್ಲಿ ಒಬ್ಬ ಪರಿಶಿಷ್ಟ ಜಾತಿ ಫಲಾನುಭವಿಗೆ ಶೆಡ್ ನಿರ್ಮಾಣ ಮಾಡಿಕೊಳ್ಳಲು ರೂ 10,000/–ಗಳನ್ನು ಒದಗಿಸಿ, ಶೆಡ್ ನಿರ್ಮಾಣ ಮಾಡಲಾಗಿದೆ

5) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರುರವರು ಸದರಿ ಕಡಕೋಳ ಗ್ರಾಮಕ್ಕೆ ಖುದ್ದಾಗಿ ಭೇಟಿ ನೀಡಿ ನೊಂದ ಪರಿಶಿಷ್ಟ ಜಾತಿ ಜನರಿಗೆ ಅನುಕೂಲವಾಗುವಂತೆ ರೂ 50,000/–ಗಳ ಅನುದಾನದಲ್ಲಿ ಕಿರಾಣಿ ಅಂಗಡಿಯನ್ನು ಮಂಜೂರು ಮಾಡಿರುತ್ತಾರೆ ಅಲ್ಲದೇ ಗ್ರಾಮದ ಇನ್ನೊಬ್ಬ ಪರಿಶಿಷ್ಟ ಜಾತಿ ವ್ಯಕ್ತಿಗೆ ಹಿಟ್ಟಿನ ಗಿರಣಿ ಸಲುವಾಗಿ ಸಾಲದೊಂದಿಗೆ ಸಹಾಯಧನ ಮಂಜೂರು ಮಾಡಿರುತ್ತಾರೆ

6) ದೌರ್ಜನ್ಯದಲ್ಲಿ ನೊಂದ ಕಡಕೋಳ ಗ್ರಾಮದ ಶ್ರೀ ಛಾಯಪ್ಪ ಅಕ್ಕಲಕೋಟ ಇವರಿಗೆ ಸಮಾಜ ಕಲ್ಯಾಣ ಇಲಾಖೆಯ ಮುಖಾಂತರ ಪರಿಹಾರಧನ ರೂ 12,500/–ಗಳನ್ನು ಮಂಜೂರಿಸಿ ಚೆಕ್ ವಿತರಿಸಲಾಗಿದೆ

7) ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಗ್ರಾಮ ಪಂಚಾಯತ್‌ನಿಂದ ಫರಸಿ ಹಾಕುರ ಕೆಲಸವನ್ನು ರೂ 50,000/–ಗಳ ಅಂದಾಜಿನಲ್ಲಿ ತೆಗೆದುಕೊಂಡಿದ್ದು ಸದರಿ ಕೆಲಸ ಮುಕ್ತಾಯವಾಗಿದೆ ಸದರಿ ಕೆಲಸವನ್ನು ಕೂಡ ಪರಿಶಿಷ್ಟ ಜಾತಿ ಜನರಿಗೆ ಕೊಟ್ಟು ಮಾಡಿಸಲಾಗಿದೆ

8) ಕಡಕೋಳ ಗ್ರಾಮದಿಂದ ದೋಣಿಗೆ ಹೋಗುವ ರಸ್ತೆ ಕಾಮಗಾರಿ ನಿರ್ವಹಣೆಯ ಸಂಬಂಧಿಸಿದಂತೆ ರೂ 2 00 ಲಕ್ಷ ಅನುದಾನದಲ್ಲಿ ಕಾಮಗಾರಿಯು ಪ್ರಾರಂಭದ ಹಂತದಲ್ಲಿದೆ

9) ಸಮಾಜ ಕಲ್ಯಾಣ ಇಲಾಖೆಯಿಂದ ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ವಿಜಾಪೂರ ಇವರಿಗೆ ಬಿಡುಗಡೆಯಾದ ಅನುದಾನ ರೂ 8 30 ಲಕ್ಷಗಳಲ್ಲಿ ಕಡಕೋಳ ಗ್ರಾಮದಲ್ಲಿ ಹೈನುಗಾರಿಕೆ ಕಾರ್ಯಕ್ರಮವನ್ನು ಕೈಗೆತ್ತಿಕೊಂಡು ನೊಂದ ಪರಿಶಿಷ್ಟ ಜಾತಿ ಜನಾಂಗದವರಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಸದರಿ ಕಾರ್ಯಕ್ರಮದಡಿ ಸದ್ಯ ಫಲಾನುಭವಿಗಳ ಆಯ್ಕೆ ನಡೆದಿದ್ದು ಪ್ರಗತಿಯಲ್ಲಿರುತ್ತದೆ

10) ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗ್ರಾಮದ ಪರಿಶಿಷ್ಟ ಜಾತಿ ಜನರ ಸ್ವಯಂ ಉದ್ಯೋಗಕ್ಕಾಗಿ ಆಡು ಸಾಕಾಣಿಕೆ, ಬಟ್ಟೆ ವ್ಯಾಪಾರ, ಚರ್ಮ ಕೈಗಾರಿಕೆ, ಸೈಕಲ್‌ಶಾಪ್, ಚಹಾದ ಅಂಗಡಿ ವಿವಿಧ ಬಗೆಯ ವ್ಯಾಪಾರಕ್ಕಾಗಿ ಸಾಲದ ರೂಪದಲ್ಲಿ ರೂ 17 71 ಲಕ್ಷ ಅನುದಾನ 80 ದಲಿತರ ಫಲಾನುಭವಿಗಳಿಗೆ ಸಾಲ ಪತ್ರವನ್ನು ಹಂಚಲಾಗಿದೆ

603 (1053) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ವರ್ಗಗಳಿಗೆ ಸೇರಿದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ವಸತಿ ನಿಲಯಗಳ ಸಂಖ್ಯೆ ಎಷ್ಟು? (ಪೂರ್ಣ ವಿವರಗಳನ್ನು ಒದಗಿಸುವುದು)